ಶ್ರೀ ಜೆ. ಎಲ್. ಕಬಾಡೆ.— ಕುಡಿಯುವ ನೀರಿಗಾಗಿ ಕೂಡಿಸಿದ ಪಂಪುಸೆಟ್ಟುಗಳು ಉತ್ತಮ ಗುಣಮಟ್ಟದಿಲ್ಲದ ಕಾರಣ ಕೂಡಿಸಿದ ದಿನವೇ ಕೆಟ್ಟು ಉಪಯೋಗವಾಗದಿರುವ ಕಾರಣ ಜನತೆಗೆ ಕುಡಿಯುವ ನೀರಿನ ವುರವಣೆ ಲೋಗ್ಯರೀತಿಯಿಂದ ಆಗದ್ದಕ್ಕೆ ತೊಂದರೆಗೀಡಾಗಿದ್ದು ಸರ್ಕಾರದ ಗಮನಕ್ಕೆ ಬಂವಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ 'ಇಲ್ಲ' ಎಂದು ಹೇಳಿದ್ದೀರಿ. ಈ ಯಂತ್ರಗಳನ್ನು ಯಾವ ಕಂಪನಿಯಿಂದ ಖರೀದಿ ಮಾಡಿದ್ದೀರಿ, ಇಷ್ಟು ಬೆಲೆಯುಳ್ಳದ್ದನ್ನು ಖರೀದಿ ಮಾಡಿದ್ದೀರಿ ಮತ್ತು ಯಾವತ್ತು ಖರೀದಿಮಾಡಿದ್ದೀರಿ?

†ಶ್ರೀ ಕೆ. ಪ್ರಭಾಕರ್.—ಮೊದಮೊದಲು ಜೋಡಿಸಿದ ಪಂಪುಸೆಟ್ಟುಗಳನ್ನು ಬೇಗ ಬೇಗ ಕೆಟ್ಟು ಹೋಗುತ್ತವೆ ಎಂದು ತಿಳಿದು ಸ್ವಲ್ಪ ದಿನ ಬಾಳಿಕೆ ಬರುವ ಯಂತ್ರಗಳನ್ನು ಇಲಾಖೆಯವರು ಜೋಡಿಸುತ್ತಿದ್ದಾರೆ. ಈಗ ಹೆಚ್ಚಾಗಿ ಕೆಟ್ಟು ಹೋಗುವುದಿಲ್ಲ ಎಂದು ಗೊತ್ತಾಗಿದೆ. ಇದಕ್ಕೆ ಮುಖ್ಯ ಕಾರಣ ಏನೆಂದರೆ, ಇದು ಹೊಸ ಪದ್ಧತಿಯದು Rough use by villagers. ಇದನ್ನು ಉಪಯೋಗಿಸುವುದಕ್ಕೆ ಅಷ್ಟಾಗಿ ಬಾರದೇ ಇರುವುದು, ಒಂದೊಂದು ಸಲ ಮಣ್ಣು, ಕಲ್ಲು ತುಂಬುವುದರಿಂದ ಕೆಟ್ಟು ಹೋಗುತ್ತದೆ ಎಲ್ಲೆಲ್ಲ ಕೆಟ್ಟುಹೋಗಿದೆ ಎಂದು ಸಂಬಂಧಪಟ್ಟವರ ಗಮನಕ್ಕೆ ಬುದ ಕೂಡಲೇ ರಿಪೇರಿ ಮಾಡುವ ವ್ಯವಸ್ಥೆ ಕೂಡ ಮಾಡಲಾಗಿದೆ. ನಾನು ನಿನ್ನೆ ಉತ್ತರ ಕೊಟ್ಟ ಹಾಗೆ ಇನ್ನೂ ಉತ್ತಮವಾದ ಪಂಪುಸೆಟ್ಟುಗಳಿವೆಯೇ ಎನ್ನುವುದನ್ನು ಕಂಡುಕೊಂಡು ಇನ್ನೂ ಹೆಚ್ಚಿನ ಉತ್ತಮ ರೀತಿಯಲ್ಲಿ ಜೋಡಿಸಬೇಕು ಎಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಜೆ. ಎಲ್, ಕಬಾಡೆ.—ಇಂಡಿ ಮತ್ತು ಸಿಂಧಗಿ ತಾಲ್ಲೂಕಿನಲ್ಲಿ ಇನ್ನೂ ಮಳೆ ಬಿದ್ದಿಲ್ಲ, ನೀರಿನ ಅಭಾವ ಇದೆ. ಆದುದರಿಂದ ಅಲ್ಲಿಗೆ ಇನ್ನೂ ಹೆಚ್ಚಿನ ರಿಗ್ ಮಿಷನ್ನುಗಳನ್ನು ಕಳಿಸಿ, ಬಾವಿಗಳನ್ನು ತೆಗೆಸಲಿಕ್ಕೆ ಏರ್ಪಾಡುಮಾಡುತ್ತೀರಾ?

ಶ್ರೀ ಕೆ. ಪ್ರಭಾಕರ್.—ನಾನು ಮೊನ್ನೆ ತಾನೆ ಆ ಎರಡು ಪ್ರದೇಶಗಳಿಗೂ ಹೋಗಿ ನೋಡಿಕೊಂಡು ಬಂದಿದ್ದೇನೆ. ಅಲ್ಲಿ ನೀರಿಗೆ ತೊಂದರೆಯಾಗಿರತಕ್ಕ ಗ್ರಾಮಗಳನ್ನು ಬಹುಬೇಗ ತೆಗೆದುಕೊಳ್ಳಬೇಕು ಎಂದು ಆದೇಶ ಕೊಟ್ಟಿದ್ದೇನೆ. ಅಲ್ಲಿನ ಶಾಸಕರು, ಮುಖ್ಯಸ್ಥರಾದಿಯಾಗಿ ನೀರಿಗೆ ತೊಂದರೆ ಇರತಕ್ಕ ಗ್ರಾಮಗಳನ್ನು ಪಟ್ಟಿಮಾಡಿಕೊಟ್ಟಿದ್ದಾರೆ ಅದನ್ನು ಸಂಬಂಧಪಟ್ಟವರಿಗೆ ಕೊಟ್ಟು, ಬೇಗ ಪೂರೈಸಬೇಕು ಎಂದು ಆದೇಶಕೊಟ್ಟಿರುವುದರಿಂದ ಕೆಲಸಕಾರ್ಯಗಳು ವ್ಯವಸ್ಥಿತವಾಗಿ ನಡೆಯುತ್ತಿವೆ.

ಶ್ರೀ ಜೆ ಎಲ್. ಕಬಾಡೆ.—೪–೫ ಸಾವಿರ ಜನಸಂಖ್ಯೆ ಇರುವ ಹಳ್ಳಿಗಳಲ್ಲಿ ಒಂದೇ ಒಂದು ರಿಗ್‌ವೆಲ್ ತೆಗೆಯುವುದರಿಂದ ಸಾಕಷ್ಟು ನೀರನ್ನು ಕೊಡುವುದಕ್ಕೆ ಆಗುತ್ತಾ ಇಲ್ಲ. ಆದುದರಿಂದ ದೊಡ್ಡ ಪ್ರಮಾಣದಲ್ಲಿ ಜನಸಂಖ್ಯೆ ಇರತಕ್ಕ ಹಳ್ಳಿಗಳಿಗೆ ಕನಿಷ್ಟ ೪–೫ ರಿಗ್ ಬಾವಿಗಳನ್ನು ತೆಗೆದರೆ ಅನುಕೂಲವಾಗುತ್ತದೆ. ಹೆಚ್ಚು ಜನಸಂಖ್ಯೆ ಇರುವ ಕಡೆ ೪–೫ ಬಾವಿಗಳನ್ನು ತೆಗೆಸುವುದಕ್ಕೆ ಆರ್ಡರ್‌ನ್ನು ಮಾಡುತ್ತೀರಾ?

ಶ್ರೀ ಕೆ ಪ್ರಭಾಕರ್.—ಹೆಚ್ಚು ಜನಸಂಖ್ಯೆ ಇದ್ದರೂ ಒಂದೇ ಬಾವಿಯಲ್ಲಿ ಹೆಚ್ಚು ಹೆಚ್ಚು ನೀರು ಸಿಗುವ ಸಂದರ್ಭಗಳು ಉಂಟು. ಒಂದು ವೇಳೆ ನೀರು ಕಡಿಮೆಯಾಗಿ ಒಂದೇ ಬಾವಿಯಿಂದ ನೀರು ಎಷ್ಟು ಬೇಕೋ ಅಷ್ಟು ಒದಗಿಸುವುದಕ್ಕೆ ಆಗದೇ ಹೋದರೆ ಒಂದೆರೆಡು ಮೂರು ಬೇಕು ಎಂದರೆ ತೆಗೆಯುವ ವ್ಯವಸ್ಥೆ ಮಾಡುತ್ತೇವೆ. ಮಾನ್ಯ ಸದಸ್ಯರು ಹೇಳಿದ ಪ್ರಶ್ನೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಸಂಬಂಧಪಟ್ಟವರ ಗಮನಕ್ಕೆ ತಂದು ಅವಶ್ಯಕವಾದರೆ ಅದಕ್ಕೆ ವ್ಯವಸ್ಥೆಮಾಡುತ್ತೇವೆ.

ಶ್ರೀ ಜೆ. ಎಲ್. ಕಬಾಡೆ.—ಈಗ ತೆಗೆದಿರತಕ್ಕ ರಿಗ್ ವೆಲ್‌ಗಳಲ್ಲಿ ಮಳೆಯಾಗದೇ ಇರುವುದರಿಂದ ನೀರಿನ ಮಟ್ಟ ಕೆಳಗೆ ಹೋಗುತ್ತದೆ. ಪಂಪುಗಳಲ್ಲಿ ನೀರು ಬರುವುದಿಲ್ಲ. ಅದಕ್ಕೆ ಕೂಡಿಸಿರತಕ್ಕ ಪಂಪುಗಳಿಗೆ ಆಳದಿಂದ ನೀರನ್ನು ಜಗ್ಗತಕ್ಕ ಶಕ್ತಿ ಇರುವುದಿಲ್ಲ, ಅದಕ್ಕೆ ಏನು ಮಾಡುತ್ತೀರಾ?

ಶ್ರೀ ಕೆ. ಪ್ರಭಾಕರ್.—ವಾಸ್ತವಿಕವಾಗಿ ಅಂಥವನ್ನು ಫೈಲ್ಡ್ ವೆಲ್ ಎಂದು ತಿಳಿದುಕೊಳ್ಳಲಾಗಿದೆ. ಅಲ್ಲಿ ರಿಗ್‌ವೆಲ್ ಮಾಡಿದರೆ ನೀರು ಬರಬಹುದು. ಅದನ್ನು ಹಾಗೆಯೇ ದುರಸ್ತು ಮಾಡಿದರೆ ವಿಫಲ ಪ್ರಯತ್ನವಾಗುವುದರಿಂದ ಅಲ್ಲಿ ಹೊಸದಾಗಿ ಬಾವಿಯನ್ನು ತೆಗೆಯಬೇಕಾಗುತ್ತದೆ. ಎಲ್ಲಾ ಕಡೆಯೂ ನೀರನ್ನು ಕೊಡಬೇಕು ಎನ್ನುವ ಉದ್ದೇಶದಿಂದ ಹೊಸ ಬಾವಿಯನ್ನು ತೆಗೆಯುವ ಪ್ರಯತ್ನಮಾಡುತ್ತೇವೆ.

Expenditure incurred by PLD Banks in Mysore District

264. SRI K. SIDDAIAH (Santhemarahalli). —Will the Minister for Co-operation be pleased to state:—

(*a*) the expenditure incurred by the PLD Banks in Mysore District during the year 73-74. 74-75 and 75-76 on (1) T.A and D.A. for the officials and non-officials of the Banks and (2) in connection with the collection of dues from the members;

(*b*) whether the inspecting officer has examined (i) the necessity of undertaking such tours (ii) whether such tours have been actually performed and the amount charged to the parties is justifiable in accordance with rules;

(*c*) whether there is may rule to inform the parties regarding the expenses incurred by the officials in connection with such tours?

SRI K. H. RANGANATH (Minister for Co-operation).—

(*a*) Year	T.A. & D.A. to officials and non-officials	Expenses towards collection of dues
1973-74	58120-49	1,26,252-69
1974-75	79989-94	1,61,090-92
1975-76	80506-56	2,20,379-77

(*b*) (i) Yes.

(ii) Wherever the expenses are heavy the inspecting officers have observed in their reports.

(*c*) No. such rules are framed.

ಶ್ರೀ ಕೆ. ಸಿದ್ದಯ್ಯ —ನನ್ನ 'ಎ' ಪ್ರಶ್ನೆಗೆ ಉತ್ತರವಾಗಿ ಮೈಸೂರು ಜಿಲ್ಲೆಯಲ್ಲಿ ೧೯೭೫-೭೬ರಲ್ಲಿ ೨, ೨೦, ೩೭೯-೭೭ ರೂಪಾಯಿಗಳು ಎಂದು ಹೇಳಿದ್ದೀರಿ. ಚಾಮರಾಜನಗರದಲ್ಲಿ ಎಷ್ಟು ಎಂದು ಹೇಳುತ್ತೀರಾ ಸ್ವಾಮಿ ?

† ಶ್ರೀ ಕೆ. ಎಚ್. ರಂಗನಾಥ್.—ಚಾಮರಾಜನಗರದಲ್ಲಿ ಟಿ.ಎ.ಡಿ.ಎ.ಗೆ ೭೯೯೮-೦೦ ರೂಪಾಯಿಗಳು ರಿಕವರಿ ಚಾರ್ಜಸ್ ೩೪೯೧-೨೫ ರೂಪಾಯಿಗಳು.

ಶ್ರೀ ಕೆ. ಸಿದ್ದಯ್ಯ.—ಟಿ. ಎ. ವಸೂಲಿಗೋಸ್ಕರ ಬ್ಯಾಂಕ್ ಆಫೀಷಿಯಲ್ಸ್ ಟೂರ್ ಹೋದಾಗ ಎಷ್ಟು ಖರ್ಚಾಗುತ್ತದೋ ಅದನ್ನು ಅವರವರಿಗೇ ಚಾರ್ಜ್ ಮಾಡುತ್ತೀರಾ. ಅಥವಾ ಎಷ್ಟು ಖರ್ಚಾಗುತ್ತದೋ ಅಷ್ಟನ್ನು ಕೊಡುತ್ತೀರಾ ಏಕೆಂದರೆ, ಅವರು ಹೋಗದೇ ಇದ್ದರೂ ಹೋಗಿದ್ದೆ ಎಂದು ಹೇಳುವುದಕ್ಕೆ ಅವಕಾಶವಿದೆ. ಆದುದರಿಂದ ಇದರ ಬಗ್ಗೆ ಯಾವುದಾದರೂ ರೂಲ್ ಇದ್ದರೆ ಒಳ್ಳೆಯದಲ್ಲವೇ ?

ಶ್ರೀ ಕೆ ಎಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ನಾವು ವಸೂಲಿಯಾಗಿರುವುದನ್ನೂ, ಖರ್ಚಾಗಿರುವುದನ್ನೂ ನೋಡಿದರೆ ಅಷ್ಟೇನೂ ಹೆಚ್ಚು ಖರ್ಚಾಗಿಲ್ಲ ಎಂದು ಗೊತ್ತಾಗುತ್ತದೆ. ಮಾನ್ಯ ಸದಸ್ಯರ ಗಮನಕ್ಕೆ ತರಬೇಕಾದರೆ, ೧೯೭೫-೭೬ರಲ್ಲಿ ೪೭,೭೦ ೦೦೦ ರೂಪಾಯಿಗಳು ವಸೂಲಿಯಾಗಿದೆ, ಟಿ.ಎ.ಡಿ.ಎ ಗೆ ಖರ್ಚಾಗಿರುವ ಅಂಕಿ ಅಂಶಗಳನ್ನು ಕೊಟ್ಟಿದ್ದೇನೆ. ೧೯೭೪-೭೫ರಲ್ಲಿ ೫೦,೯೨,೦೦೦ ರೂಪಾಯಿಗಳು ವಸೂಲಿಯಾಗಿದೆ. ೧೯೭೫-೭೬ರಲ್ಲಿ ೬೬ ಲಕ್ಷ ರೂಪಾಯಿಗಳು ವಸೂಲಿಯಾಗಿದೆ. ರಿಕವರಿ ಚಾರ್ಜಸ್ ೪ ಪರ್ಸೆಂಟ್ ಬರುತ್ತದೆ. ನಾರ್ಮಲ್ಲಾಗಿ ೩ ಪರ್ಸೆಂಟ್ ಪರ್ಮಿಸಬಲ್. ಆದರೂ ಕೂಡ ಒಂದು ಪರ್ಸೆಂಟ್ ಜಾಸ್ತಿಯಾಗಿದೆ. ಮಾನ್ಯ ಸದಸ್ಯರು ಇದನ್ನು ನೋಡಿದಾಗ ಜಾಸ್ತಿಯಾಗಿ

ಕಾಣುತ್ತದೆ, ಈಗ ಯಾವುದೇ ಸೆಟ್ ರೂಲ್ಸ್ ಇಲ್ಲದೇ ಇರುವುದರಿಂದ ಜೀಪು ವಗೈರೆ ತೆಗೆದುಕೊಂಡು ಸಂತ್ರಿ ಸಾಲಗಾರರ ತಲೆಮೇಲೆ ಹಾಕತಕ್ಕಂಥಾದ್ದಿದೆ, ಆದ್ದರಿಂದ ಆ ರೀತಿ ಮಾಡುವುದನ್ನು ನಿತಿಮಿತಿಯೊಳಗೆ ಇಡಬೇಕು, ರೂಲ್ಸ್ ಫ್ರೇಂ ಹಾಡಬೇಕು ಎನ್ನುವ ಬಗ್ಗೆ ವಿಚಾರ ಮಾಡುತ್ತೇವೆ. ಮಾನ್ಯ ಸದಸ್ಯರ ಅಭಿಪ್ರಾಯ ಸಾಧುವಾದುದು, ಆದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ೧೮೬ (೩೪೫) ಈ ಪ್ರಶ್ನೆಗೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಯೈಗೆ ಹುಷಾರಿಲ್ಲವೆಂದು ತಿಳಿಸಿರುವುದರಿಂದ ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

Lift Irrigation near Danagere, Kollegal Taluk

355. SRI M. SIDDAMADAIAH (Kollegal).—Will the Minister for Rural Development and Panchayati Raj be pleased to state.—

(*a*) whether the Government has received any representaion to extend the Lift Irrigation facilities near Danagere of Kollegal Taluk since the present Irrigation Scheme constructed by Taluk Board irrigate only 100 acres of land ;

(*b*) if so, the action taken by the Government ;

(*c*) whether it has come to the notice of the Government that the 600 acres of Palya, Urani, Chaluvanahalli and Danagere Achucut area would come under irrigation if nearly 8-10 Pumpsets are installed ?

SRI H. C. SRIKANTIAH (Minister of State for Minor Irrigation and Protocol) [on behalf of Sri K. Prabhakar (Minister for Rural Development and Panchayati Raj)].

(*a*) No.

(*b*) Does not arise.

(*c*) No.

ಶ್ರೀ ಎಂ. ಸಿದ್ದಮಾದಯ್ಯ,—ನನ್ನ 'ಎ' ಪ್ರಶ್ನೆಗೆ 'ಇಲ್ಲ' ಎಂದು ಹೇಳಿದ್ದೀರಿ. ನಾವು ಒಂದು ವರ್ಷದಿಂದ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ, ಸರ್ಕಾರದ ಗಮನಕ್ಕೆ ಬಂದಿದೆ. ಇಲಾಖೆಯವರು ನಿಮಗೆ ಸರಿಯಾದ ಉತ್ತರ ಕೊಟ್ಟಿಲ್ಲ ಎಂದು ಕಾಣುತ್ತದೆ. ನೀವು ಕೊಟ್ಟಿರುವ ಉತ್ತರ ನಿಜವೇ ಎನ್ನುವುದು ಗೊತ್ತಾಗಬೇಕು.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಸದಸ್ಯರು ಏನು ಆಗಬೇಕು ಎಂದು ಕೇಳಿದರೆ ಹೇಳುತ್ತೇನೆ

ಶ್ರೀ ಎಂ. ಸಿದ್ದಮಾದಯ್ಯ.—ಕೊಳ್ಳೆಗಾಲದಲ್ಲಿ ದನಗೆರೆ ಲಿಫ್ಟ್ ಇರಿಗೇಷನ್ ಇದೆ. ಅದರ ಬಗ್ಗೆ ಆ ಪ್ರದೇಶದ ಜನರು ಮಾನ್ಯ ಮಂತ್ರಿಗಳಿಗೆ ಬೇಡಿಕೆಗಳನ್ನು ಕೊಟ್ಟಿದ್ದಾರೆ. ಆದರೂ ಸಹ ಈಗ ಉತ್ತರದಲ್ಲಿ ಯಾವುದೂ ಬಂದಿಲ್ಲ ಎಂದು ಹೇಳುತ್ತಿದ್ದಿರಿ. ಇದು ಏಕೆ ಬರಲಿಲ್ಲ ಎನ್ನುವುದು ಅನುಮಾನಾಸ್ಪದವಾಗಿದೆ ಸ್ವಾಮಿ.

ಶ್ರೀ ಎಚ್. ಸಿ. ಶ್ರೀಕಂಠಯ್ಯ —ಈ ಲಿಫ್ಟ್ ಇರಿಗೇಷನ್ನಿನಿಂದ ೧೨೦ ಎಕರೆಯವರೆಗೆ ಅಚ್ಚುಕಟ್ಟಿಗೆ ಅನುಕೂಲವಿದೆ. ಹೆಚ್ಚು ಅಚ್ಚುಕಟ್ಟಿಗೆ ಆನುಕೂಲವಾಗಬೇಕಾದರೆ ತಾಲ್ಲೂಕಿನ ಬೋರ್ಡಿನವರು ಬೇರೆ ಬಾವಿ ತೆಗೆಸಲು ಪ್ರಯತ್ನಮಾಡಬೇಕು. ಆದರೆ ನನಗೆ ಬಂದಿರುವ ವರದಿ ಪ್ರಕಾರ ಆ ರೀತಿಯಾಗಿ ಮಾಡುವುದಕ್ಕಾಗುವುದಿಲ್ಲ, ಮಾನ್ಯ ಸದಸ್ಯರು ಈಗ ಬೇರೆ ಲಿಫ್ಟ್ ಇರಿಗೇಷನ್ ಮಾಡಬೇಕೆಂದು ಹೇಳುತ್ತಿದ್ದಾರೆ. ಆದರೆ ಬಗ್ಗೆ ಇನ್ನೂ ಇನ್‌ವೆಸ್ಟಿಗೇಷನ್ ಮಾಡುತ್ತಿದ್ದೇವೆ. ಆ ಇನ್‌ವೆಸ್ಟಿಗೇಷನ್ನನ್ನೂ ಸಹ ಎಕ್ಸ್‌ಪೆಡೈಟ್ ಮಾಡುತ್ತಿದ್ದೇವೆ.